21 ನೇ ರಾಷ್ಟ್ರೀಯ ಜಾನುವಾರು ಗಣತಿ

Posted at: 28/10/2024

21 ನೇ ರಾಷ್ಟ್ರೀಯ ಜಾನುವಾರು ಗಣತಿ

ಕೇಂದ್ರ ಮೀನುಗಾರಿಕೆ, ಪಶು ಸಂಗೋಪನೆ, ಮತ್ತು ಹೈನುಗಾರಿಕೆ ಸಚಿವಾಲಯದಿಂದ ಹಮ್ಮಿಕೊಂಡಿರುವ 21 ನೇ ರಾಷ್ಟ್ರೀಯ ಜಾನುವಾರು ಗಣತಿಗೆ ಇತ್ತೀಚೆಗೆ ನವದೆಹಲಿಯಲ್ಲಿ ಚಾಲನೆ ನೀಡಲಾಯಿತು.

ರಾಷ್ಟ್ರೀಯ ಜಾನುವಾರು ಗಣತಿ ಯ ಬಗ್ಗೆ ತಿಳಿಯಿರಿ :

ಪ್ರತೀ 5 ವರ್ಷಕ್ಕೊಮ್ಮೆ ದೇಶದಲ್ಲಿ ಜಾನುವಾರು ಗಣತಿ ನಡೆಯುತ್ತದೆ.
ನಮ್ಮ ದೇಶದಲ್ಲಿರುವ ಸಾಕು ಪ್ರಾಣಿಗಳು, ಕೋಳಿ ಸಾಕಣೆ ಕೇಂದ್ರದಲ್ಲಿರುವ ಕೋಳಿಗಳನ್ನು, ಹಾಗೂ ಇತರ ನಿರ್ಗತಿಕ ಬೀಡಾಡಿ ಪ್ರಾಣಿಗಳನ್ನೂ ಗಣತಿಯಲ್ಲಿ ಎಣಿಕೆ ಮಾಡಲಾಗುತ್ತದೆ.
ಸಚಿವಾಲಯ : ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯವು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸಹಭಾಗಿತ್ವದಲ್ಲಿ ಗಣತಿಯನ್ನು ನಡೆಸುತ್ತದೆ.
ಜಾನುವಾರು ಗಣತಿ ಸಂದರ್ಭದಲ್ಲಿ, ಯಾವ ತಳಿಯ ಜಾನುವಾರುಗಳು? ಯಾವ ವಯಸ್ಸು? ಯಾವ ಲಿಂಗ ? ಯಾರು ಈ
ಪ್ರಾಣಿಗಳ ಮಾಲೀಕರು?, ಎಷ್ಟು ರೈತರು?, ಯಾವ ವರ್ಗದ ರೈತರು?, ಎಷ್ಟು ಮಹಿಳೆಯರು ಇದರಲ್ಲಿ ತೊಡಗಿಸಿಕೊಂಡಿದ್ದಾರೆ? ಎಂಬ ಮಾಹಿತಿ ಕಲೆ ಹಾಕಲಾಗುತ್ತದೆ.
ಜಾನುವಾರು ಗಣತಿಯನ್ನು 1919 ರಿಂದ ನಡೆಸಲಾಗುತ್ತಿದೆ. ಕಳೆದ 100 ವರ್ಷಗಳಲ್ಲಿ ಒಟ್ಟು 20 ಗಣತಿಗಳು ನಡೆದಿದೆ. ಕಳೆದ ಬಾರಿಯ ಗಣತಿ 2019 ರಲ್ಲಿ ನಡೆದಿತ್ತು.

21ನೇ ಜಾನುವಾರು ಗಣತಿಯ ಪ್ರಮುಖ ಲಕ್ಷಣಗಳು:

ಅಕ್ಟೋಬರ್ 2024 ರಿಂದ ಫೆಬ್ರವರಿ 2025 ರವರೆಗೆ 4 ತಿಂಗಳ ಕಾಲ ಈ ಬೃಹತ್ ಸಮೀಕ್ಷೆ ನಡೆಯುತ್ತದೆ.
ಕಳೆದ ಬಾರಿ 2019 ರಲ್ಲಿ ನಡೆದ ಗಣತಿಯಂತೆಯೇ ಈ ಬಾರಿಯೂ ಜಾನುವಾರು ಗಣತಿಯನ್ನು ಸಂಪೂರ್ಣವಾಗಿ ಡಿಜಿಟಲೀಕರಣಗೊಳಿಸಲಾಗುವುದು.
21 ನೇ ಜಾನುವಾರು ಗಣತಿ ಎಂಬ ಮೊಬೈಲ್ ಅಪ್ಲಿಕೇಶನ್ ಸಿದ್ಧಪಡಿಸಲಾಗಿದ್ದು ಆ ಮೂಲಕ ಆನ್ಲೈನ್ ಡೇಟಾ ಸಂಗ್ರಹಣೆ, ಡಿಜಿಟಲ್ ಡ್ಯಾಶ್ಬೋರ್ಡ್ ಮೂಲಕ ಮೇಲ್ವಿಚಾರಣೆ, ಸ್ಥಳ ಟ್ರ್ಯಾಕಿಂಗನ್ನು ಮಾಡಲಾಗುತ್ತದೆ. ಕೊನೆಗೆ ಇವೆಲ್ಲದರ ಸಿದ್ದವಾದ ವರದಿ ಅಪ್ಲಿಕೇಶನ್ ನಲ್ಲೇ ಮೂಡಿಬರುತ್ತದೆ.
16 ಜಾತಿಯ ಜಾನುವಾರುಗಳು ಹಾಗೂ ಅವುಗಳ 219 ತಳಿಗಳ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ. ಜಾನುವಾರುಗಳು ಮಾತ್ರವಲ್ಲದೆ ಇವುಗಳನ್ನು ಸಲಹುವ ಪಶುಪಾಲಕರ ಸಂಖ್ಯಾ ವರದಿಯನ್ನೂ ಹಾಗೂ ಜಾನುವಾರು ಪಾಲನೆಯಲ್ಲಿ ಮಹಿಳೆಯರ ಪಾತ್ರವನ್ನೂ ವಿಶ್ಲೇಷಿಸಲಾಗುತ್ತದೆ.